# ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯಃ ಬೇಲೂರು

**ಃಸಿ.ಸಿ. 354/2019**

| | | |
|---|---|---|
| ಪಿರ್ಯಾದಿ | ಃ | ಶ್ರೀ ಬಿ.ಸಿ. ಸುಬ್ಬೇಗೌಡ ಬಿನ್ ಲೇಟ್ ಚಿಕ್ಕೇಗೌಡ,<br>ವಯಸ್ಸು ಸುಮಾರು 65 ವರ್ಷ,<br>ಹನುಮಂತ ನಗರ,<br>ಬೇಲೂರು ಪಟ್ಟಣ,<br>ಹಾಸನ ಜಿಲ್ಲೆ. |

ವಿರುದ್ದ

| | | |
|---|---|---|
| ಆರೋಪಿ | ಃ | ಪ್ರೊ॥ ಮಹಮದ್ ಜಾಫರ್,<br>ಪಾಪ್ಯುಲರ್ ಹಾರ್ಡ್ ವೇರ್,<br>ನೆಹರು ನಗರ,<br>ಬೇಲೂರು ಪಟ್ಟಣ,<br>ಹಾಲಿ ವಾಸಃ ಮುಸ್ತಫ ಬೀದಿ,<br>ಬೇಲೂರು ಪಟ್ಟಣ,<br>ಹಾಸನ ಜಿಲ್ಲೆ. |

## ಃ ಆರೋಪಣೆಯ ಸಾರಾಂಶ ಃ

ಆರೋಪಿಯಾದ ನೀವು 2019 ರ ಫೆಬ್ರವರಿ ಮೊದಲ ವಾರದಲ್ಲಿ ಪಿರ್ಯಾದಿಯ ಬಳಿ ಬಂದು ನಿಮ್ಮ ದರುದ್ದು ನಿಮಿತ್ತ ಅಂದರೆ ಹಾರ್ಡ್ ವೇರ್ ಅಂಗಡಿಯ ಅಭಿವೃದ್ಧಿ ಉದ್ದೇಶಕ್ಕಾಗಿ ತುರ್ತಾಗಿ ರೂ.4,50,000/– ಹಣದ ಅವಶ್ಯಕತೆ ಇದೆ ಕೊಡಿ ಎಂದು ಕೇಳಿದ್ದು, ಅದರಂತೆ ಪಿರ್ಯಾದುದಾರರು ಆರೋಪಿಯಾದ ನಿಮಗೆ ರೂ.4,50,000/– ಗಳನ್ನು ಸಾಲವಾಗಿ ನೀಡಿದ್ದು, ಸದರಿ ಸಾಲ ಮರುಪಾವತಿ ಮಾಡುವ ಉದ್ದೇಶದಿಂದ ಆರೋಪಿಯಾದ ನೀವು ಖಾತೆ ಹೊಂದಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಬೇಲೂರು ಶಾಖೆಯ ಚೆಕ್ ನಂಃ 379288 ರ ರೂ.4,50,000/– ಮೊತ್ತದ ಚೆಕ್‌ನ್ನು ದಿನಾಂಕಃ 20–04–2019 ಕ್ಕೆ ನಮೂದಿಸಿ ಕೊಟ್ಟಿದ್ದು, ಪಿರ್ಯಾದುದಾರರು ಸದರಿ ಚೆಕ್‌ನ್ನು ನಗಧೀಕರಿಸಿಕೊಳ್ಳುವ ಉದ್ದೇಶದಿಂದ ಪಿರ್ಯಾದುದಾರರು ದಿನಾಂಕಃ 21–05–2019 ರಂದು

ತಮ್ಮ ಖಾತೆ ಹೊಂದಿರುವ ಹೆಚ್.ಡಿ.ಸಿ.ಸಿ. ಬ್ಯಾಂಕ್, ಬೇಲೂರು ಶಾಖೆಯ ಮೂಲಕ ಆರೋಪಿಯಾದ ನಿಮ್ಮ ಬ್ಯಾಂಕ್‌ಗೆ ಹಾಜರುಪಡಿಸಿದಾಗ ನೀವು ಕೊಟ್ಟಂಟಹ ಚೆಕ್ ನಗದಾಗದೇ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇರುವುದಿಲ್ಲ ಎಂದು ಪಿರ್ಯಾದಿಯ ಬ್ಯಾಂಕ್ ಗೆ ಕಳುಹಿಸಿದ್ದು, ಸದರಿ ಚೆಕ್ ನ್ನು ಪಿರ್ಯಾದುದಾರರ ಬ್ಯಾಂಕ್ ನವರು ದಿನಾಂಕಃ 23–05–2019 ರಂದು ಪಿರ್ಯಾದುದಾರರಿಗೆ ಹಿಂದಿರುಗಿಸಿರುತ್ತಾರೆ. ನಂತರ ಆರೋಪಿಯಾದ ನಿಮಗೆ ದಿನಾಂಕಃ 08–06–2019 ರಂದು ಚೆಕ್ ನಗಧೀಕರಣಗೊಳ್ಳದ ಸಂಗತಿಯನ್ನು ನೊಂದಾಯಿತ ಅಂಚೆಯ ನೋಟೀಸಿನ ಮೂಲಕ ಕಳಹಿಸಿದ್ದು, ಸದರಿ ನೋಟೀಸ್ ನ್ನು ಆರೋಪಿಯಾದ ನೀವು ಸದರಿ ನೋಟೀಸ್ ನ್ನು ದಿನಾಂಕಃ 10–06–2019 ರಂದು ಪಡೆದುಕೊಂಡಿದ್ದರೂ ಸಹ ಪಿರ್ಯಾದುದಾರರಿಂದ ಸಾಲವಾಗಿ ಪಡೆದ ಹಣವನ್ನು ನೀಡದೇ. ಆರೋಪಿಯಾದ ನಿನ್ನ ಖಾತೆಯಲ್ಲಿ ಸಾಕಷ್ಟು ಹಣವಿಲ್ಲದೇ ಇದ್ದರೂ ಸಹ ಸದರಿ ನಿಮ್ಮ ಖಾತೆಯು ನಿರ್ಬಂಧಿಸಿದ ಸ್ಥಿತಿಯಲ್ಲಿ ಇದ್ದರೂ ಸಹ ಚೆಕನ್ನು ನೀಡಿ ವರ್ಗಾವಣೆಗೊಳ್ಳಬಲ್ಲ ದಸ್ತಾವೇಜಗಳ ಅಧಿನಿಯಮ ಪ್ರಕರಣ 138 ಸಹವಾಚಕ 142 ರಂತೆ ಅಪರಾಧವನ್ನು ಎಸಗಿರುತ್ತೀಯಾ ಅಂತ ಪಿರ್‍ಯಾದಿ ಆರೋಪಿಸಿರುತ್ತಾನೆ.

*ಪ್ರಶ್ನೆ ಃ ಈಗ ನಿನಗೆ ಓದಿ ಹೇಳಿ ವಿವರಿಸಿದ ಆರೋಪದ ಅಂಶಗಳು ಅರ್ಥವಾಯಿತೇ?*

*ಉತ್ತರ ಃ*

*ಪ್ರಶ್ನೆ ಃ ನೀನು ಆರೋಪವನ್ನು ಒಪ್ಪುವೆಯೋ ಅಥವಾ ವಿಚಾರಣೆಯಾಗಬೇಕೋ?*
*ಉತ್ತರಃ।*

(ಆಪಾದಿತನಿಗೆ ಆರೋಪದ ಅಂಶವನ್ನು ಓದಿ ಹೇಳಿ ವಿವರಿಸಿದ ಮೇಲೆ ಆತನು ಮೇಲ್ಕಂಡಂತೆ ನೀಡಿದ ಉತ್ತರವನ್ನು ಸ್ವಹಸ್ತಾಕ್ಷರದಿಂದ ಮುಕ್ತ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಗಿದೆ ಎಂದು ದೃಡೀಕರಿಸಲಾಗಿದೆ.)

ಸ್ಥಳ ಃ ಬೇಲೂರು
ದಿನಾಂಕಃ 07–10–2022.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಬೇಲೂರು.